ನಿಂತಲ್ಲಿ, ಕುಳಿತಲ್ಲಿ, ಬಿಸಿಲ ಬೇಗೆಗೆ ಬಸವಳಿದು ಮಲಗಿದಲ್ಲಿ ಕಣ್ಣಮುಂದೆ ಹಗಲುಗನಸುಗಳು. ಸಂಕೋಚದ ಸ್ವಭಾವದಿಂದಾಗಿ ಎಲ್ಲದರಲ್ಲೂ ಹಿಂದೆ ಉಳಿದು ತಪ್ಪಿಹೋಗುವ ಅವಕಾಶಗಳು. ತಾರುಣ್ಯದ ಕಳವಳ, ಉದ್ವಿಗ್ನತೆ ನನ್ನನ್ನು ನೇರ ಪುಸ್ತಕ ಮತ್ತು ಕಥಾಲೋಕಕ್ಕೆ ಕರೆದೊಯ್ದವು. ಈ ಹಾದಿ ಕಡುಕಷ್ಟದ್ದೆಂದು ಮನವರಿಕೆಯಾದಂತೆಲ್ಲ ಅದಕ್ಕೇ ಅಂಟಿಕೊಳ್ಳಬೇಕೆಂಬ ಜಿಗುಟುತನ, ಹಟ, ಅದರೆಲ್ಲ ಸೊಬಗು, ಸಂಕಟಗಳನ್ನು ನನ್ನದನ್ನಾಗಿಸಿಕೊಳ್ಳುವಂತೆ ಮಾಡಿದವು. ಆಯ್ಕೆಯಾಗಲಿ, ಆನಂತರದ ದಾರಿಯಾಗಲಿ ಆಕಸ್ಮಿಕವಲ್ಲ. ಬರಹಗಾರನಲ್ಲದೆ ಬೇರೇನಾದರೂ ಆಗುವ ಮಾರ್ಗ ತಿಳಿದಿರದ ತರುಣ ಆಯ್ದುಕೊಂಡ ಅನಿವಾರ್ಯ ದಾರಿ ಅದಾಗಿತ್ತು. ಪುಸ್ತಕಗಳಲ್ಲಿಯೇ ನನ್ನ ಜಗತ್ತು ಮೊದಲಾಗಿ, ಕೊನೆಯಾಗುತ್ತಿತ್ತು. ಬಹುಶಃ ನಾನು ಕವಿತೆಗಳನ್ನು ಬರೆಯಲು ಆರಂಭಿಸಿದ್ದು ಇಪ್ಪತ್ತರ ವಯಸ್ಸಿನಲ್ಲಿ. ಆದರೆ, ಎರಡು–ಮೂರು ವರ್ಷಗಳಲ್ಲಿ ಕವಿತೆಯ ಆರ್ದ್ರತೆ, ಅಮೂರ್ತತೆ, ಸೆಳೆತ ಮತ್ತು ಚೆಲುವಿಗೂ ಮೀರಿರುವ ಅನುಭವಗಳನ್ನು ನಾನು ಹೇಳಬೇಕಿದ್ದು ಕಾವ್ಯಕ್ಕಿಂತ ಕಥಾ ಮಾಧ್ಯಮವೇ ನನಗೆ ಹೇಳಿ ಮಾಡಿಸಿದ್ದು ಎಂದು ತಿಳಿಯತೊಡಗಿತು. ಹಾಗೆ ಅರಿವಾದ ಕ್ಷಣದಿಂದ ಕಥೆಗಳೇ ನನ್ನ 'ಧರ್ಮ'ವಾಗಿವೆ. ಆ ಕ್ಷಣ ನಿನ್ನೆಯಷ್ಟೇ ಎನ್ನುವಂತಿದ್ದರೂ ಮೂವತ್ತೆರಡು ವರ್ಷ ಕಳೆದಿವೆ. ಕಥೆಗಳ ಬರವಣಿಗೆಯ ಆರಂಭದಲ್ಲಿ ಒಂದೆಡೆ ಟೊಳ್ಳು ಸಿದ್ಧಾಂತಗಳ ಅಬ್ಬರ ಜೋರಾಗಿದ್ದರೆ, ಇನ್ನೊಂದೆಡೆ ಕೃತಕ ಅಲಂಕಾರಿಕ ಭಾಷೆಯ ಸೋಗಿನ ನವಿರು ಬರವಣಿಗೆಯ ಪ್ರವಾಹ. ಲೇಖಕನಾಗಿ ಇವೆರಡರ ನಡುವಿನ ಸಮತೋಲನವನ್ನು ಕಾಯ್ದುಕೊಳ್ಳುವುದು ಕೂಡ ಹೋರಾಟದಂತೆಯೇ ಇತ್ತು, ಇದೆ. ಮೂರು ದಶಕಗಳಾದರೂ ಇಂತಹ ಲೇಖಕರ ಉಬ್ಬರವಿನ್ನೂ ಇಳಿದಿಲ್ಲವೆನ್ನುವುದು ನಿಜ. ಇಂಥದ್ದರ ಹೊರತಾಗಿಯೂ ಮಂದ್ರದನಿಗಳಿಗೂ ಅಪ್ಪಟ ಓದುಗರಿದ್ದಾರೆಂಬುದನ್ನು ಈ ವರ್ಷಗಳಲ್ಲಿ ಕಂಡುಕೊಂಡಿರುವೆ.

★★★

ಲೇಖಕನೊಬ್ಬನ ಬರಹ ಹೇಗೆ ರೂಪುಗೊಂಡು, ಬೆಳೆದು, ತನಗೆ ಬೇಕಾದ ಸ್ವರೂಪವನ್ನು ಪಡೆಯುತ್ತದೆನ್ನುವುದು ಅತ್ಯಂತ ಸಂಕೀರ್ಣವಾದ ಕ್ರಿಯೆ. ಕಥಾ ಹಂದರ ಮೊದಲು ಕಾಡುತ್ತದೊ, ವಿವರಗಳು ಮೊದಲು ಮುನ್ನುಗ್ಗುತ್ತವೋ ಎಂಬುದೂ ಅಮೂರ್ತವೇ. ಬರಹಗಾರನಿಗೆ ಏಕಕಾಲಕ್ಕೆ ದತ್ತವಾಗಿ ಒದಗಿಬರುವ ಅತಿ ದೊಡ್ಡ ಶಾಪ ಮತ್ತು ವರವೆಂದರೆ ಆತ ಯಾವಾಗಲೂ ಬೇರೆಯವರ ಪಾತ್ರದಲ್ಲಿ ಬದುಕಬೇಕು ಮತ್ತು ಮರುಹುಟ್ಟು ಪಡೆಯಬೇಕು ಎಂಬುದು. ಪಾತ್ರಗಳನ್ನು ಕನಸುತ್ತ ಅವುಗಳ ಸುಖದುಃಖ, ಬಯಕೆ–ಭಯಗಳನ್ನು ಅನುಭವಿಸುವುದು ಸಂತಸವೂ ಹೌದು. ಯಾತನೆ–ಅವಮಾನದ ಸಂಗತಿಯೂ ಹೌದು. ಇದು ಮೊಟ್ಟೆಯೊಂದು ಕಂಬಳಿಹುಳುವಾಗಿ, ತನ್ನ ಒಡಲಿನ ಗೂಡಲ್ಲೇ ರೂಪಾಂತರಗೊಂಡು ಚಿಟ್ಟೆಯಾಗಿ ಮರುಜೀವ ಪಡೆಯುವ ಚಮತ್ಕಾರದಂತೆ. ಲೇಖಕನ ಈ ಕಟ್ಟೇಕಾಂತ ಸಂಕೀರ್ಣತೆಗಳನ್ನು ಮೌನದಲ್ಲಿ ಅರಿತುಕೊಳ್ಳಲು, ಹೊಸ ಜೀವನದೃಷ್ಟಿಯನ್ನು ಪಡೆಯಲು, ಪಕ್ವತೆಯಿಂದ ಹೊಮ್ಮಲು ಅವಕಾಶ ಒದಗಿಸುತ್ತದೆ.

ಕಥೆಯೊಂದರ ಮಧ್ಯದಲ್ಲೋ, ಕೊನೆಗೋ ಬರುವ ಮಾತು, ವಿವರ ಇಲ್ಲವೆ ಸಂಗತಿಗಳು ಮೊದಲು ಹೊಳೆಯಬಹುದು. ಕಥೆ ಮುಗಿಸಿದ ಮೇಲೆ ಕಥೆಯೊಂದರ ಆರಂಭ ಬರೆಯಬೇಕಾಗಬಹುದು. ಪರಿಷ್ಕರಣೆ, ಜೋಡಣೆ, ಬೇಡದ್ದನ್ನು ನಿರ್ದಯವಾಗಿ ತೆಗೆದು